# ಕನ್ನಡದ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಪತ್ರಕರ್ತೆಯರ ಅನುಭವಗಳು

ಸಂಶೋಧನಾ ಅಧ್ಯಯನದ ಸಂದರ್ಭದಲ್ಲಿ ನಡೆಸಿದ
ಮಾತುಕತೆಯ ಸಾರಾಂಶದ ವರದಿ

---

December 2019

# KANAJA

*Youth Research Cell*

&

*This research was made possible through a grant by*

ಕನ್ನಡ ಮಾಧ್ಯಮಲೋಕದಲ್ಲಿ ಪತ್ರಕರ್ತೆಯರ ದಿನನಿತ್ಯದ ಸಂಘರ್ಷಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವಾಗಿ ನಡೆಸಿದ ಸಂಶೋಧನಾ ಅಧ್ಯಯನದ ಆಧಾರದ ಮೇಲೆ ಈ ವರದಿಯನ್ನು ರೂಪಿಸಲಾಗಿದೆ. ಬೆಂಗಳೂರಿನಲ್ಲಿರುವ ಪತ್ರಕರ್ತೆಯರನ್ನು ಗಮನದಲ್ಲಿರಿಸಿಕೊಂಡು ಈ ಸಂಶೋಧನೆಯನ್ನು ನಡೆಸಲಾಗಿದೆ. ಸಂವಾದ ಸಂಸ್ಥೆಯ 'ಕಣಜ ಸಂಶೋಧನಾ ವಿಭಾಗ' ಮತ್ತು 'ಬದುಕು ಸೆಂಟರ್ ಫಾರ್ ಲೈವ್ಲಿಹುಡ್ಸ್ ಲರ್ನಿಂಗ್'ನ ಮಾಧ್ಯಮ ವಿಭಾಗವು ಈ ಸಂಶೋಧನೆ ನಡೆಸಿದೆ. ಈ ಸಂಶೋಧನೆಯ ಸಂದರ್ಭದಲ್ಲಿ ಪತ್ರಕರ್ತೆಯರು ಹಂಚಿಕೊಂಡ ಅವರ ಸಂಕಷ್ಟದ ಹಾಗೂ ಸಂಘರ್ಷದ ಅನುಭವಗಳು, ಅವರೊಂದಿಗಿನ ಮಾತುಕತೆಗಳು, ಕನ್ನಡ ಮಾಧ್ಯಮಗಳಲ್ಲಿ ಕೆಲಸ ಮಾಡುತ್ತಿರುವ ಪತ್ರಕರ್ತೆಯರು ಸಾಮಾಜಿಕ ಕಟ್ಟುಪಾಡುಗಳ ನಡುವೆಯೂ ತಮ್ಮ ವೃತ್ತಿ ಮತ್ತು ವೈಯಕ್ತಿಕ ಬದುಕನ್ನು ಹೇಗೆ ನಿಭಾಯಿಸುತ್ತಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ನಮಗೆ ನೆರವಾಗುತ್ತದೆ.

'ಪತ್ರಿಕೋದ್ಯಮ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್'ನ ಆರು ಬ್ಯಾಚ್‌ಗಳನ್ನು ಯಶಸ್ವಿಯಾಗಿ ನಡೆಸಿದ ಅನುಭವದ ಆಧಾರದ ಮೇಲೆ 'ಬದುಕು ಸೆಂಟರ್ ಫಾರ್ ಲೈವ್ಲಿಹುಡ್ಸ್ ಲರ್ನಿಂಗ್'ನ ಮಾಧ್ಯಮ ವಿಭಾಗವು 2018-19ರಲ್ಲಿ ಈ ಅಧ್ಯಯನವನ್ನು ವಿನ್ಯಾಸಗೊಳಿಸಿ ಕಾರ್ಯರೂಪಕ್ಕೆ ತಂದಿತು. ಈ ಕೋರ್ಸ್‌ನ ಹಳೆಯ ವಿದ್ಯಾರ್ಥಿನಿ/ವಿದ್ಯಾರ್ಥಿಗಳು, ಮಾಧ್ಯಮ ಕ್ಷೇತ್ರದ ಗೆಳತಿ/ಗೆಳೆಯರ ಜತೆಗಿನ ಸಂವಾದ, ಮಾತುಕತೆಗಳು ಈ ಅಧ್ಯಯನಕ್ಕೆ ಅಗತ್ಯವಿದ್ದ ಪ್ರಶ್ನೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಬೆಂಗಳೂರಿನಲ್ಲಿ ವಿವಿಧ ಮಾಧ್ಯಮಗಳಲ್ಲಿ ಕೆಲಸ ಮಾಡುತ್ತಿರುವ; ವಯೋಮಾನ, ಹುದ್ದೆ, ಕೆಲಸದ ಅನುಭವ, ವೈವಾಹಿಕ ಸ್ಥಿತಿ, ಜಾತಿ, ಧರ್ಮ - ಇವೆಲ್ಲವೂ ಬೇರೆ ಬೇರೆಯಾಗಿಯೇ ಇರುವ 21ರಿಂದ 40 ವರ್ಷದೊಳಗಿನ 30 ಮಂದಿ ಪತ್ರಕರ್ತೆಯರನ್ನು ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ಉದ್ದೇಶಿತ ಮಾದರಿ ವಿಧಾನದ (purposive sampling method) ಆಧಾರದಲ್ಲಿ ಈ ಆಯ್ಕೆ ನಡೆಸಲಾಯಿತು. ಈ ಸಂದರ್ಭದಲ್ಲಿ ಭಿನ್ನ ಜಾತಿ ಮತ್ತು ಧರ್ಮಗಳಿಗೆ ಸೇರಿದ ಪತ್ರಕರ್ತೆಯರು ಸಮಪ್ರಮಾಣದಲ್ಲಿರುವಂತೆ ನೋಡಿಕೊಳ್ಳಲಾಯಿತು. ಈ ಅಧ್ಯಯನದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದವರಲ್ಲಿ ಸುದ್ದಿ ನಿರೂಪಕಿಯರು, ಕಾಪಿ ಎಡಿಟರ್‌ಗಳು, ವರದಿಗಾರ್ತಿಯರು, ಉಪ-ಸಂಪಾದಕಿಯರು, ಸಂಪಾದಕಿಯರು ಸೇರಿದಂತೆ ಎಲ್ಲಾ ಹಂತದ ಪತ್ರಕರ್ತೆಯರೂ ಇದ್ದರು.

ಮಾಧ್ಯಮ ಸಂಸ್ಥೆಗಳಲ್ಲಿ ರೂಪುಗೊಂಡಿರುವ ಲಿಂಗತಾರತಮ್ಯ 'ವ್ಯವಸ್ಥೆ' ಮತ್ತು ಮನೆಯ ಜವಾಬ್ದಾರಿಗಳೆಂಬ ಕಟ್ಟುಪಾಡುಗಳ ನಡುವೆಯೂ ಮಹಿಳೆಯರು ತಮ್ಮ ವೃತ್ತಿಜೀವನದ ಆಕಾಂಕ್ಷೆಗಳು ಮತ್ತು ನಿಜವಾದ ಅವಕಾಶಗಳ ವಿಚಾರದಲ್ಲಿ ಹೇಗೆ ಅನುಸಂಧಾನ ನಡೆಸುತ್ತಿದ್ದಾರೆ ಎಂಬುದನ್ನು ಈ ಅಧ್ಯಯನವು ಪರಿಶೀಲಿಸುತ್ತದೆ. ಈ ಅಂಶಗಳು ಪರಸ್ಪರ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ತೆರೆದಿಡುವ ಮೂಲಕ ಪತ್ರಿಕೋದ್ಯಮವನ್ನು ಹೆಣ್ಣಿನ ದೃಷ್ಟಿಕೋನದಿಂದ (gender-lens) ನೋಡಲು ಈ ಅಧ್ಯಯನ ಅನುವು ಮಾಡಿಕೊಡುತ್ತದೆ. ಪುರುಷಪ್ರಧಾನತೆಯು ಪತ್ರಿಕೋದ್ಯಮ ಕ್ಷೇತ್ರದಲ್ಲೂ ಹೇಗೆ ದಿನನಿತ್ಯದ 'ವ್ಯವಸ್ಥೆ'ಯಾಗಿ ರೂಪ ಪಡೆದಿದೆ ಎಂಬುದನ್ನು ಅರಿಯಲು ಈ ದೃಷ್ಟಿಕೋನ ನೆರವಾಗುತ್ತದೆ. ಪುರುಷರೇ ಹೆಚ್ಚಾಗಿರುವ ಕೆಲಸದ ಸ್ಥಳ ಹಾಗೂ ಪುರುಷಪ್ರಧಾನ ಕೌಟುಂಬಿಕ ವ್ಯವಸ್ಥೆಯಲ್ಲಿ ಹೆಣ್ಣಿನ ಮೇಲೆ ಹೇರಲಾಗಿರುವ ಮನೆಯ ಜವಾಬ್ದಾರಿಗಳ ನಡುವೆ ಅರೆ-ಸಂಘಟಿತ ಕ್ಷೇತ್ರದ ಕೆಲಸಗಾರ್ತಿಯರಾಗಿ ಪತ್ರಕರ್ತೆಯರ ದಿನನಿತ್ಯದ ಅನುಭವಗಳು ಹೇಗಿವೆ ಎಂಬುದನ್ನು ಈ ಅಧ್ಯಯನದಲ್ಲಿ ತೆರೆದಿಡಲಾಗಿದೆ. ಇದಲ್ಲದೆ ಜಾತಿ, ಅಂತಸ್ತು ಮತ್ತು ಧರ್ಮದ ಜೊತೆಗೆ ಲಿಂಗವನ್ನೂ ಒಂದು ವರ್ಗವಾಗಿ (category) ನೋಡಬೇಕಾದ ಅಗತ್ಯವಿದೆ ಎಂಬ ತಿಳುವಳಿಕೆಯೊಂದಿಗೆ, ಭಿನ್ನ ಸಾಮಾಜಿಕ ಸ್ಥಳಗಳು ಮಹಿಳೆಯರ ಅನುಸಂಧಾನದ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಈ ಅಧ್ಯಯನವು ತೆರೆದಿಟ್ಟಿದೆ.

ವ್ಯವಸ್ಥೆಯ ಕಟ್ಟುಪಾಡುಗಳು ಹಾಗೂ ಪತ್ರಕರ್ತೆಯರ ಅನುಸಂಧಾನದ ಮಾರ್ಗಗಳನ್ನು ಪರಿಶೀಲಿಸುವುದರ ಜತೆಗೆ ಪುರುಷಪ್ರಧಾನವಾಗಿರುವ ಮಾಧ್ಯಮ ಕ್ಷೇತ್ರದಲ್ಲಿ ಪತ್ರಕರ್ತೆಯರು ತಮ್ಮ ನೆರವಿಗಾಗಿ ಯಾವ ರೀತಿಯ ಬೆಂಬಲವ್ಯವಸ್ಥೆಯನ್ನು ರೂಪಿಸಿಕೊಂಡಿದ್ದಾರೆ ಎಂಬುದರ ಮೇಲೂ ಈ ಅಧ್ಯಯನವು ಬೆಳಕು ಚೆಲ್ಲುತ್ತದೆ. ಮಾಧ್ಯಮ ಸಂಸ್ಥೆಗಳನ್ನು ಕೆಲಸದ ಸ್ಥಳಗಳಾಗಿ ಗುರುತಿಸುವ ಪ್ರವೃತ್ತಿಗಳು ಮತ್ತು ಇಲ್ಲಿ ಪತ್ರಕರ್ತೆಯರು ನಿಭಾಯಿಸಬೇಕೆಂದು ಬಯಸುವ ಸಾಮಾಜಿಕ-ಸಾಂಸ್ಕೃತಿಕ ನಿರೀಕ್ಷೆಗಳನ್ನು ಗುರುತಿಸುವ ಮೂಲಕ ಈ ವರದಿಯು ಪ್ರಾರಂಭವಾಗುತ್ತದೆ. ಮುಖ್ಯವಾಗಿ, (i) ಮಾಧ್ಯಮ ಸಂಸ್ಥೆಗಳಲ್ಲಿ ಸಾಂಸ್ಥಿಕ ಸಂಸ್ಕೃತಿ ಮತ್ತು ಲಿಂಗತ್ವದ ಆಧಾರದಲ್ಲಿ ಭೇದಭಾವ, (ii) ಮಹಿಳೆಯರಿಗೆ ನೀಡಲಾಗಿರುವ ವಿಭಿನ್ನ ವೃತ್ತಿ ಜವಾಬ್ದಾರಿಗಳು, (iii) ಕೌಂಟುಂಬಿಕ ಬೆಂಬಲದ ಸಂಕಷ್ಟಗಳು, (iv) ಮದುವೆ ಎಂಬುದು ಅವರ ವೃತ್ತಿ ಬೆಳವಣಿಗೆಯನ್ನು ಹೇಗೆ ಛಿದ್ರವಾಗಿಸಿದೆ, (v) ಲೈಂಗಿಕ ಕಿರುಕುಳ ಅಥವಾ ಅದರ ಬಗ್ಗೆ ಭಯ, (vi) ಕೆಲಸದ ಸ್ಥಳದಲ್ಲಿ ಲಿಂಗಸ್ವಭಾವದ ಜತೆಗೆ ಜಾತಿ ಮತ್ತು ಪ್ರಾದೇಶಿಕತೆ ಕೂಡಾ ಹೇಗೆ ಪ್ರಭಾವ ಬೀರುತ್ತದೆ - ಎಂಬ ಅಂಶಗಳನ್ನು ಈ ವರದಿಯು ಒಳಗೊಂಡಿದೆ. ಈ ಅಂಶಗಳ ಆಧಾರದಲ್ಲಿ ದುಡಿಯುವ ಮಹಿಳೆಯರ ಮೇಲೆ ಯಾವ ರೀತಿಯ ಮೌಲ್ಯಗಳನ್ನು ಹೇರಲಾಗಿದೆ ಎಂಬುದನ್ನು ಈ ಅಧ್ಯಯನದಲ್ಲಿ ವಿವೇಚಿಸಲಾಗಿದೆ.

ಈ ಅಧ್ಯಯನವು ಮಹಿಳೆಯರು ಕುಟುಂಬ ವ್ಯವಸ್ಥೆಯ ಜವಾಬ್ದಾರಿಗಳು ಮತ್ತು ಹಲವು ರೀತಿಯಲ್ಲಿ ಲಿಂಗತಾರತಮ್ಯವಿನ್ನೂ ಉಳಿದಿರುವ ಮಾಧ್ಯಮಗಳ ಸಾಂಸ್ಥಿಕ ಸಂಸ್ಕೃತಿ - ಇವುಗಳ ನಡುವೆ ತಮ್ಮ ವೃತ್ತಿಆಕಾಂಕ್ಷೆಗಳು, ಲಭ್ಯವಿರುವ ಅವಕಾಶಗಳ ನಡುವೆ ಹೇಗೆ ರಾಜಿ ಮಾಡಿಕೊಳ್ಳುತ್ತಾರೆ ಎನ್ನುವುದನ್ನು ಪರಿಶೀಲಿಸುತ್ತದೆ. ಈ ಅಂಶಗಳು ಹೇಗೆ ಒಂದನ್ನೊಂದು ಪ್ರಭಾವಿಸುತ್ತವೆ ಎನ್ನುವುದನ್ನು ಪರಿಶೀಲಿಸಿದಾಗ ಮಾಧ್ಯಮ ಸಂಸ್ಥೆಗಳನ್ನು ಲಿಂಗಾಧಾರಿತ ಕಣ್ಣೋಟದಿಂದ ನೋಡಬಹುದು ಹಾಗೂ ಈ ಸಂಸ್ಥೆಗಳಲ್ಲಿರುವ ಪುರುಷ ಪ್ರಧಾನ ವ್ಯವಸ್ಥೆಯ ಸಾಮಾಜಿಕ ಸಂಬಂಧಗಳ ಸ್ವರೂಪವನ್ನು ಅರಿಯಬಹುದು. ಒಂದೆಡೆ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯ ಜವಾಬ್ದಾರಿಗಳು, ಮತ್ತೊಂದೆಡೆ ಸಂಪೂರ್ಣವಾಗಿ ಸಂಘಟಿತವಲ್ಲದ ಸಂಸ್ಥೆಗಳಲ್ಲಿ ಕೆಲಸಗಾರರಾಗಿ ಮಹಿಳೆಯರ ಸ್ಥಾನಮಾನ - ಹೀಗೆ ಪುರುಷ ಪುರುಷ ಪ್ರಧಾನ ವ್ಯವಸ್ಥೆಯಿರುವ ಕೆಲಸದ ಸ್ಥಳದಲ್ಲಿ ಹೆಣ್ಣಿನ ಅನುಭವಗಳನ್ನು ಇವು ತೆರೆದಿಡುತ್ತವೆ. ಜೊತೆಗೆ ಲಿಂಗ ವರ್ಗೀಕರಣವನ್ನು ಜಾತಿ, ವರ್ಗ ಮತ್ತು ಧರ್ಮದ ಹಿನ್ನೆಲೆಯಲ್ಲೂ ನೋಡಬೇಕಿದೆ. ಮಹಿಳೆಯರ ಸಾಮಾಜಿಕ ಸ್ಥಾನಮಾನ ಹಾಗೂ ಅವರ ರಾಜಿ ಸಂಧಾನಗಳು ಲಿಂಗಾಧಾರಿತ ಮಾತ್ರವಲ್ಲದೆ ಜಾತಿ, ವರ್ಗ ಮತ್ತು ಧರ್ಮದ ಹಿನ್ನಲೆಯಲ್ಲೂ ಪ್ರಭಾವ ಬೀರುವುದನ್ನು ಅರ್ಥಮಾಡಿಕೊಳ್ಳಬೇಕಿದೆ.

## ೧. ಕನ್ನಡ ಮಾಧ್ಯಮಗಳಲ್ಲಿ ಸಾಂಸ್ಥಿಕ ಲಿಂಗತಾರತಮ್ಯದ ವಿಭಿನ್ನ ರೂಪಗಳು

**ಮಹಿಳೆಯರ ಸಾಮರ್ಥ್ಯ ಕುರಿತ ಗ್ರಹಿಕೆಗಳು**: ಈ ಅಧ್ಯಯನದಲ್ಲಿ ಭಾಗವಹಿಸಿದವರು ಕನ್ನಡ ಮಾಧ್ಯಮಗಳ ಕಾರ್ಯಕ್ಷೇತ್ರದಲ್ಲಿ ಹೇಗೆ ಸಾಂಸ್ಥಿಕ ಲಿಂಗತಾರತಮ್ಯವು ಕಾರ್ಯನಿರ್ವಹಿಸುತ್ತದೆ ಎನ್ನುವುದನ್ನು ಹೇಳಿಕೊಂಡಿದ್ದಾರೆ. ಬಣ್ಣ ಮತ್ತು ಸೌಂದರ್ಯದ ಕುರಿತು ಸಮಾಜವು ರೂಪಿಸಿರುವ ಮಾನದಂಡಗಳಿಗೆ ಅನುಗುಣವಾಗಿ ಅವಕಾಶದ ಬಾಗಿಲುಗಳು ತೆರೆದುಕೊಳ್ಳುತ್ತವೆ. ಅದರಲ್ಲೂ ಮುಖ್ಯವಾಗಿ ದೃಶ್ಯಮಾಧ್ಯಮದಲ್ಲಿ ಅರ್ಹತೆಗಿಂತ ಹೆಚ್ಚಾಗಿ ಈ ಮಾನದಂಡಗಳೇ ಮುಖ್ಯವಾಗುವ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಯಶಸ್ವಿ ಮಹಿಳಾ ಸಹೋದ್ಯೋಗಿಗಳ ಯಶಸ್ಸಿನ ಹಿಂದಿರುವ ಕಾರಣ ಇದೇ ಎನ್ನುವುದು ಪುರುಷ ಮತ್ತು ಮಹಿಳಾ ಸಹದ್ಯೋಗಿಗಳ ಅಭಿಮತ. ವೃತ್ತಿ ಕ್ಷೇತ್ರದೊಳಗೆ ಕಾಲಿಡುವಾಗ ಹಾಗೂ ಕಾಲಿಟ್ಟ ನಂತರದಲ್ಲಿನ ಹೆಣ್ಣಿನ ವೈಯುಕ್ತಿಕ ಪಯಣದ ಸವಾಲುಗಳು ಮತ್ತು ವೃತ್ತಿಯಲ್ಲಿನ ಸವಾಲುಗಳನ್ನು ಸಾಮಾಜಿಕ ಕಲ್ಪನೆಯಲ್ಲಿನ ಹೆಣ್ತನದಿಂದ ಅಳೆದು ಆಕೆಯ ಯಶಸ್ಸಿಗೆ - ಸೋಲಿಗೆ ಇದೇ ಕಾರಣ ಎನ್ನುವ ಹಣೆಪಟ್ಟಿ ಹಚ್ಚಲಾಗುತ್ತದೆ. ವೃತ್ತಿಕ್ಷೇತ್ರಕ್ಕೆ ಸಂಬಂಧಿಸಿದ ಚರ್ಚೆಯಲ್ಲಿ ಮಹಿಳೆ ವ್ಯಕ್ತಿಯಾಗಿ ಹಿಂದೆ ಸರಿದುಬಿಡುತ್ತಾಳೆ.

**ಮಹಿಳಾ ಉದ್ಯೋಗಿಗಳು ಹೊರೆ ಎನ್ನುವ ದೃಷ್ಟಿಕೋನ**: ಗಂಡಾದರೆ 'ಸಾಮಾನ್ಯ' ನೌಕರ ಎಂದು ನೋಡಲಾಗುತ್ತದೆ. ಅದೇ ಹೆಣ್ಣಾದರೆ ಹೆಚ್ಚುವರಿ ರಜೆಯ ಸೌಲಭ್ಯಗಳು, ಸುರಕ್ಷತೆ ಮತ್ತು ಪ್ರಯಾಣ

ಸೌಲಭ್ಯಗಳು ಇವೆಲ್ಲವನ್ನೂ ನೀಡಬೇಕಾಗುವುದರಿಂದ ಆಕೆಯನ್ನು ಸಂಸ್ಥೆಗೆ ಆರ್ಥಿಕ ಹೊರೆಯೆಂದೇ ಪರಿಗಣಿಸಲಾಗುತ್ತದೆ. ಪತ್ರಕರ್ತೆಯರಿಗೆ ನಿಜವಾಗಿ ನೀಡಲಾಗುವ ಸೌಲಭ್ಯಗಳನ್ನು ನೋಡಿದರೆ ಇದು ಎಂತಹ ತಪ್ಪಾದ ದೃಷ್ಟಿಕೋನ ಎನ್ನುವುದು ಅರ್ಥವಾಗುತ್ತದೆ. ಮಾತೃತ್ವ ರಜೆ, ಪಿಎಫ್, ಮಕ್ಕಳಿಗಾಗಿ ಕ್ರಷ್ ಸೌಲಭ್ಯ, ಮುಟ್ಟು/ಅನಾರೋಗ್ಯದ ಸಂದರ್ಭದಲ್ಲಿ ರಜೆಯ ಸೌಲಭ್ಯ, ಶೌಚಾಲಯ ಸೌಲಭ್ಯ ಇವೆಲ್ಲವುಗಳ ಕೊರತೆಯಿದೆ.

**ಮಹಿಳೆಯರಿಗೆ 'ಸಾಫ್ಟ್ ಬೀಟ್' ಮತ್ತು ಕಲಿಕೆಗೆ ಕಡಿಮೆ ಅವಕಾಶ:** ಪ್ರತಿಕ್ರಿಯೆ ನೀಡಿದವರಲ್ಲಿ ಕೆಲವರು ತಮ್ಮ ವೃತ್ತಿ ಜೀವನದಲ್ಲಿನ ಪ್ರಗತಿಗೆ ಸಹದ್ಯೋಗಿಗಳು ನೆರವು ನೀಡಿದರು ಎಂದು ಹೇಳಿದರು. ಉಳಿದವರು ಗಂಡಸರಿಗೆ ಹೋಲಿಸಿದರೆ, "ತಮಗೆ ಹೆಚ್ಚು ಮುಖ್ಯವಲ್ಲದ ಇಲ್ಲವೇ ಕಡಿಮೆ ಜವಾಬ್ದಾರಿಗಳನ್ನು ನೀಡಲಾಗಿದೆ" ಎಂದು ಹೇಳಿದರು. ಸಂಸ್ಥೆಗಳು ಇದಕ್ಕೆ ಹಲವು ಸಬೂಬುಗಳನ್ನು ನೀಡುತ್ತವೆ. ಸೂಕ್ಷ್ಮವಾದ ಸುದ್ದಿಗಳು ಅಥವಾ ಪ್ರದೇಶಗಳಿಗೆ ಮಹಿಳೆಯರನ್ನು ಅವರ ಸುರಕ್ಷತೆಯ ಹಿತದೃಷ್ಟಿಯಿಂದ ಕಳಿಸುವುದಿಲ್ಲ ಎನ್ನುತ್ತವೆ ಸಂಸ್ಥೆಗಳು. ಮಹಿಳೆಯರು ಮುಖ್ಯವಾದ ಸುದ್ದಿಗಳನ್ನು ವರದಿ ಮಾಡಲು ಸಾಧ್ಯವಿಲ್ಲ ಎನ್ನುವ ಧೋರಣೆಯಿಂದಲೇ ಅವರಿಗೆ ಹೆಚ್ಚು ಮುಖ್ಯವಲ್ಲದ ಸಾಫ್ಟ್ ಬೀಟ್ ಸುದ್ದಿಯ ವರದಿಗಾರಿಕೆಯನ್ನು ನೀಡಲಾಗುತ್ತದೆ. ಇದರಿಂದಾಗಿ ಮಹಿಳೆಯರು ತಮ್ಮ ವೃತ್ತಿಯಲ್ಲಿನ ಪ್ರಗತಿ ಹಾಗೂ ವೃತ್ತಿ ಸಂತೃಪ್ತಿಯ ದೃಷ್ಟಿಯಿಂದ ಕೊರತೆ ಎದುರಿಸುತ್ತಾರೆ. ಹೆಚ್ಚಿನ ತರಬೇತಿಯಿಂದ ವಂಚಿತರಾಗಿ ತಾಂತ್ರಿಕ ಪರಿಣತಿ ಮತ್ತು ಜ್ಞಾನದ ಕೊರತೆಯಿಂದ ತಮ್ಮೊಂದಿಗಿನ ಪುರುಷ ಸಹದ್ಯೋಗಿಗಳಿಗಿಂತ ಹಿಂದುಳಿಯುತ್ತಾರೆ.

**ಮಹಿಳೆಯರನ್ನು ಪರಸ್ಪರ ಪ್ರತಿಸ್ಪರ್ಧಿಗಳಾಗಿಸುವುದು:** ಮಹಿಳೆಯೊಬ್ಬಳು ಹಿರಿಯ ಹುದ್ದೆಯಲ್ಲಿ ಇಲ್ಲವೇ ಮೇಲೇರುವ ಸಾಧ್ಯತೆಗಳಿದ್ದಲ್ಲಿ ಆಕೆಗಿಂತ ಕಿರಿಯಳು ಅವಳನ್ನು ಹಿಂದಿಕ್ಕದೆ ಮುಂದುವರೆಯುವುದು ಸಾಧ್ಯವಿಲ್ಲ. ಹಿರಿಯ ಹುದ್ದೆಯಲ್ಲಿರುವ ಪುರುಷನನ್ನು ಹಿಂದಿಕ್ಕಿ ತಾನು ಮುಂದುವರೆಯಬಹುದು ಎನ್ನುವುದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಇದು ಮಹಿಳಾ ಸಿಬ್ಬಂದಿ ನಡುವೆ ಅನಾರೋಗ್ಯಕರ ಸ್ಪರ್ಧೆಯನ್ನು ಹುಟ್ಟುಹಾಕಿ ಅವರೆಲ್ಲರೂ ಒಟ್ಟಾಗಿ ಮುಂದುವರೆಯಬಹುದು ಎನ್ನುವ ಪ್ರಜ್ಞೆಯನ್ನು ಹಾಳುಮಾಡುತ್ತದೆ.

**ಕೆಲಸ ಮಾಡುವ ಸ್ಥಳದಲ್ಲಿ ಮುಟ್ಟನ್ನು ಗುಟ್ಟಾಗಿಡಬೇಕಾದ ಸ್ಥಿತಿ:** ಹೆಚ್ಚಿನ ಕೆಲಸದ ಸ್ಥಳಗಳಲ್ಲಿ ಮುಟ್ಟನ್ನು ಬಹಿರಂಗವಾಗಿ ಮಾತಾಡುವುದು ಸಾಧ್ಯವಿಲ್ಲ. ಕೆಲವು ಪತ್ರಕರ್ತೆಯರು ತಮ್ಮ ಮಹಿಳಾ ಸಹದ್ಯೋಗಿಗಳೊಂದಿಗೆ ಈ ಕುರಿತು ಹೇಗೆ ಅನೌಪಚಾರಿಕ ಮಾತುಕತೆ ನಡೆಯುತ್ತದೆ, ಹೇಗೆ ಅವರಿಗೆ ನೆರವು ಸಿಗುತ್ತದೆ ಎನ್ನುವುದನ್ನು ಹಂಚಿಕೊಂಡರು. ನಿರ್ಧಾರಗಳನ್ನು ತೆಗೆದುಕೊಳ್ಳುವಂತಹ ಹುದ್ದೆಗಳಲ್ಲಿ ಮಹಿಳೆಯರು ಇಲ್ಲದಿರುವುದು ಈ ಪರಿಸ್ಥಿತಿಗೆ ಮುಖ್ಯ ಕಾರಣ. ಆದ್ದರಿಂದಲೇ ಇವು ಖಾಸಗಿ ಮಾತುಕತೆಗಳಿಗೆ ಸೀಮಿತವಾಗಿದ್ದು ಕೆಲಸ ಮಾಡುವ ಸ್ಥಳದಲ್ಲಿ ಮುಟ್ಟಿನ ನೋವನ್ನು ಅನುಭವಿಸಿದರೂ ನ್ಯಾಯಸಮ್ಮತವಾಗಿ ಸಿಗಬೇಕಾದ ಸೌಲಭ್ಯ ಸಿಗುತ್ತಿಲ್ಲ.

**೨. ಮದುವೆ ಎನ್ನುವುದು ಪತ್ರಕರ್ತೆಯರ ವೃತ್ತಿಗೆ ತಡೆ**

**ಸಂಗಾತಿಯನ್ನು ಹುಡುಕುವ ಸಂಕಷ್ಟಗಳು:** ಪತ್ರಕರ್ತೆಯರನ್ನು ಅವರ ಮನೆಯವರು ಹಾಗೂ ಸಮಾಜ, 'ದುಡುಕು ಸ್ವಭಾವದವರು, ಗಂಡುಬೀರಿಯರು, ಸ್ವೇಚ್ಛಾಚಾರಿಗಳು' ಎಂದೇ ನೋಡುತ್ತಾರೆ. ಟಿವಿಗಳಲ್ಲಿ ಅವರು ಕಾಣಿಸಿಕೊಳ್ಳುವುದು, ವೃತ್ತಿ ಜೀವನದಲ್ಲಿ ಪ್ರಗತಿ ಸಾಧಿಸುವುದು ಎಲ್ಲವೂ ಇದ್ದರೂ ಕೂಡ ಅವರನ್ನು ನೋಡುವ ನೋಟದ ಹಿಂದೆ ನೈತಿಕತೆ ಪೂರ್ವಗ್ರಹಗಳು, ಸಾಮಾಜಿಕ ಪೂರ್ವಗ್ರಹಗಳು ಇದ್ದೇ ಇರುತ್ತವೆ. ಈ ರೀತಿಯ ಮಿಥ್ಯೆಗಳು, ನಂಬಿಕೆಗಳಿಂದಾಗಿ ಸಂಗಾತಿಗಳನ್ನು ಹುಡುಕಿಕೊಳ್ಳುವುದು ಪತ್ರಕರ್ತೆಯರಿಗೆ ಕಷ್ಟವಾಗುತ್ತದೆ. ಈ ಅಧ್ಯಯನ ತಂಡದೊಂದಿಗೆ ಮಾತುಕತೆ ನಡೆಸಿದವರಲ್ಲಿ ತಾವು ಎದುರಿಸುವ ಒತ್ತಡಗಳು ಹೇಗೆ ತಮ್ಮ ಮಾನಸಿಕ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎನ್ನುವ ಕುರಿತು ಹೇಳಿಕೊಂಡಿದ್ದಾರೆ.

**ವಿವಾಹಿತ ಪತ್ರಕರ್ತೆಯರ ಕುರಿತು ಕುಟುಂಬದ ನಿರೀಕ್ಷೆಗಳು:** ಮಾಧ್ಯಮ ವೃತ್ತಿಯಲ್ಲಿ ಮಹಿಳೆಯರ ಆದಾಯ ಕುಟುಂಬದ ಆದಾಯಕ್ಕೆ ಹೆಚ್ಚಿನ ಕೊಡುಗೆಯನ್ನು ನೀಡಲಾರದು. ಹಾಗಾಗಿ ಅತ್ತೆ ಮಾವನ

ಮನೆಯಲ್ಲಿ ಆಕೆಯ ವೃತ್ತಿಯ ಆಯ್ಕೆಗೆ ಸಹಕಾರ ಸಿಗುವುದಿಲ್ಲ. ಆಕೆಯಿಂದ ಮನೆಗೆಲಸ, ಆರೈಕೆಗಳ ನಿರೀಕ್ಷೆಯೇ ಹೆಚ್ಚಿರುತ್ತದೆ. ಪೂರ್ಣ ಪ್ರಮಾಣದಲ್ಲಿ ವೃತ್ತಿಯಲ್ಲಿ ತೊಡಗಿಸಿಕೊಂಡು ಹಣ ಗಳಿಸುವುದಕ್ಕಿಂತ ಆಕೆ ಮನೆಕೆಲಸದ ಕಡೆಗೆ ಗಮನನೀಡಿ ಕುಟುಂಬದ ಆರೈಕೆಯಲ್ಲಿ ತೊಡಗಬೇಕೆಂದು ಮನೆಯವರು ನಿರೀಕ್ಷಿಸುತ್ತಾರೆ. ಹೀಗಿರುವಾಗ ಕೆಲಸದ ಮೇಲೆ ಅವರು ಎಲ್ಲಿಗಾದರೂ ಹೋಗುವುದಾಗಲಿ, ಚರ್ಚೆ ಇಲ್ಲವೆ ಮಾತುಕತೆಗಳಲ್ಲಿ ತೊಡಗಿಸಿಕೊಳ್ಳುವುದು ಅಥವಾ ಮತ್ತೊಂದು ಜಾಗಕ್ಕೆ ವರ್ಗವಣೆಯಾದಾಗ ಅಂಜಿಕೆ ಇಲ್ಲದೆ ಹೋಗುವುದು ಪತ್ರಕರ್ತೆಯರಿಗೆ ಸಾಧ್ಯವಾಗುವುದಿಲ್ಲ. ಈ ಎಲ್ಲ ಅಡೆತಡೆಗಳು ಅವರನ್ನು ನಿಂತಲ್ಲೇ ನಿಲ್ಲುವಂತೆ ಮಾಡಿ ಕಡೆಗೊಮ್ಮೆ ಕೆಲಸವನ್ನೇ ಬಿಡುವಂತೆ ಮಾಡುತ್ತದೆ.

**ವಿವಾಹಿತ ಪತ್ರಕರ್ತೆಯರ ಕುರಿತು ಕೆಲಸ ಮಾಡುವ ಸ್ಥಳದಲ್ಲಿನ ದೃಷ್ಟಿಕೋನ:** ಒಂಟಿಯಾಗಿರುವ, ಮದುವೆ ಮಾಡಿಕೊಳ್ಳಲು ಬಯಸುವ ಪತ್ರಕರ್ತೆಯರನ್ನು ಸಂಶಯದಿಂದ ನೋಡಲಾಗುತ್ತದೆ. ಅವರ ಬದಲಿಗೆ ಮತ್ತೊಬ್ಬರನ್ನು ತೆಗೆದುಕೊಳ್ಳಬೇಕಾಗುತ್ತದೆ, ಅವರ ಕೆಲಸದ ಅವಧಿಯನ್ನು ಕಡಿತಗೊಳಿಸಬೇಕಾಗುತ್ತದೆ, ಅವರು ಸುದ್ದಿಯ ವರದಿಗಾರಿಕೆಯನ್ನು ಬಿಡಬಹುದು ಇಲ್ಲವೇ ಕೆಲಸವನ್ನೇ ಬಿಡಬಹುದು ಎನ್ನುವ ಸಂಶಯಗಳು ಸಂಸ್ಥೆಗಳಲ್ಲಿ ಮನೆಮಾಡಿವೆ. ಈ ರೀತಿಯ ಪೂರ್ವಗ್ರಹಗಳು ಅವರಿಗೆ ಬಡ್ತಿ ದೊರೆಯದಂತೆ ಮಾಡುತ್ತವೆ. ಇದೆಲ್ಲದರ ನಡುವೆಯೇ ತಮ್ಮ ಕೆಲಸವನ್ನು ಉಳಿಸಿಕೊಳ್ಳಲು ಆಡಳಿತ ಮಂಡಳಿಯೊಂದಿಗೆ ರಾಜಿ ಮಾತುಕತೆಗೆ ಇಳಿಯುತ್ತಾರೆ, ಇಲ್ಲವೇ ತಮ್ಮ ಮಹಿಳಾ ಸಹೋದ್ಯೋಗಿಗಳ ಜೊತೆ ಮಾತಾಡಿ ಬೇರೆ ದಾರಿ ಹುಡುಕಿಕೊಳ್ಳುತ್ತಾರೆ. ಈ ನಿದರ್ಶನಗಳು ಕೆಲವೇ ಆದರೂ ಭವಿಷ್ಯದ ಸಾಧ್ಯತೆಗಳತ್ತ ಬೊಟ್ಟುಮಾಡಿ ತೋರಿಸುತ್ತಿವೆ. ಕುಟುಂಬದ ಸಹಕಾರವು ಹಲವರು ತಮ್ಮ ಕೆಲಸವನ್ನು ಉಳಿಸಿಕೊಳ್ಳಲು ನೆರವಾಗಿದೆ. ಉಳಿದ ವೃತ್ತಿಗಳಲ್ಲಿರುವಂತೆ ಇಲ್ಲೂ ಕೂಡ ಸಾರ್ವಜನಿಕ ಹಾಗೂ ಖಾಸಗಿ ಬದುಕಿನ ಸಮತೋಲನವನ್ನು ಕಾಯ್ದುಕೊಳ್ಳುವ ತಂತಿಯ ಮೇಳಿನ ನಡಿಗೆಯನ್ನು ಮಹಿಳೆಯರು ಮಾಡಲೇಬೇಕಾಗುತ್ತದೆ.

**೩. ಲೈಂಗಿಕ ಕಿರುಕುಳದ ಕರಿನೆರಳು**

**ಲೈಂಗಿಕ ಕಿರುಕುಳದ ಅನುಭವಗಳು:** ಈ ಅಧ್ಯಯನ ತಂಡದೊಂದಿಗೆ ಮಾತನಾಡಿದವರು ತಾವು ದಿನನಿತ್ಯ ಎದುರಿಸುವ ಹೀಗಳಿಕೆಗಳು, ಅಶ್ಲೀಲ ಕಾಮೆಂಟುಗಳು, ಸಾಮಾಜಿಕ ಮಾಧ್ಯಮಗಳ ಮೂಲಕ ಕಳಿಸಲಾಗುವ 'ಬೇಡವಾದ ಸಂದೇಶಗಳು' ಮತ್ತು ಹಿಂಸೆಯಾಗುವ ದೈಹಿಕ ಸಂಪರ್ಕಗಳ ಕುರಿತು ಹೇಳಿಕೊಂಡಿದ್ದಾರೆ. ಹಲವು ಪತ್ರಕರ್ತೆಯರು ಈ ಕುರಿತು ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಈ ಕಿರುಕುಳ ಎನ್ನುವುದು ಬಾಡಿ ಶೇಮಿಂಗ್, ಇಷ್ಟವಿಲ್ಲದ ದೈಹಿಕ ಸಂಪರ್ಕ, ಕೆಟ್ಟ ಸಂದೇಶಗಳು, ತಮ್ಮ ವೈಯಕ್ತಿಕ ಜೀವನದ ಕುರಿತ ಟೀಕೆಗಳು ಸಾಮಾನ್ಯವಾಗಿದ್ದು ಅವುಗಳನ್ನು ತಮ್ಮ ವೃತ್ತಿ ಬದುಕಿನಲ್ಲಿ ಸಾಮಾನ್ಯ ಎನ್ನುವ ಹಾಗೆ ಸ್ವೀಕರಿಸುವ ಅನಿವಾರ್ಯತೆಯನ್ನು ಸೃಷ್ಟಿಸಿದೆ.

ಲೈಂಗಿಕ ಕಿರುಕುಳ ತಡೆಯಲು ಹಾಗೂ ಪರಿಹರಿಸಲು ವ್ಯವಸ್ಥೆಯ ಕೊರತೆ: ನಮ್ಮ ಅಧ್ಯಯನದ ಭಾಗವಾಗಿದ್ದ ಪತ್ರಕರ್ತೆಯರು ಇಲ್ಲಿ ಲೈಂಗಿಕ ಕಿರುಕುಳಗಳು ವರದಿಯಾಗುವುದು ವಿರಳ ಎಂದು ಹೇಳಿದರು. ಅವರ ಮಾತುಗಳಿಂದ ಎಲ್ಲೆಡೆಯೂ ಇರುವ ಈ ಸಮಸ್ಯೆಯನ್ನು ತಡೆಯಲು ಇಲ್ಲವೇ ಪರಿಹರಿಸಲು ಯಾವುದೇ ಸೂಕ್ತ ವ್ಯವಸ್ಥೆಯಿಲ್ಲವೆನ್ನುವುದು ಅರ್ಥವಾಯಿತು. ನಾವು ಮಾತನಾಡಿಸಿದ ಹಲವರು ಹೇಳಿದ ಪ್ರಕಾರ ಅವರು ಕೆಲಸ ಮಾಡುವ ಸಂಸ್ಥೆಗಳಲ್ಲಿ ಲೈಂಗಿಕ ಕಿರುಕುಳ ಕುರಿತು ದೂರು ನೀಡಲು ಯಾವುದೇ ಸಮಿತಿಯಿಲ್ಲ ಅಥವಾ ತಮ್ಮ ದೂರನ್ನು ದಾಖಲಿಸಲು ಯಾವುದೇ ಔಪಚಾರಿಕ ಮಾರ್ಗಗಳಿಲ್ಲ. ತನ್ನ ಸಹೋದ್ಯೋಗಿಯಿಂದಾಗುವ ಲೈಂಗಿಕ ಕಿರುಕುಳವನ್ನು ಮಹಿಳೆ ಏಕಾಂಗಿಯಾಗಿ ಎದುರಿಸಬೇಕಾಗುತ್ತದೆ. ಒಂದು ವೇಳೆ ಲೈಂಗಿಕ ಕಿರುಕುಳದ ದೂರನ್ನು ದಾಖಲಿಸುವ ವ್ಯವಸ್ಥೆಯಿದ್ದರೂ ಅದರ ಪರಿಣಾಮಗಳು ಹಾಗೂ ಆ ಕಾರಣದಿಂದಾಗಿ ಕೆಲಸ ಕಳೆದುಕೊಳ್ಳಬೇಕಾದ ಸಾಧ್ಯತೆಗಳೂ ಇರುವುದನ್ನು ಅವರು ಹೇಳಿಕೊಂಡಿದ್ದಾರೆ.

ಹಲವು ಸಂದರ್ಭಗಳಲ್ಲಿ ಕೆಲಸದಲ್ಲಿ ಹಿರಿಯರಾದ ಪುರುಷ ಸಹದ್ಯೋಗಿಗಳೇ ನೇರವಾಗಿ ಇಲ್ಲವೆ ಪರೋಕ್ಷವಾಗಿ ಈ ರೀತಿಯ ಕಿರುಕುಳದಲ್ಲಿ ಭಾಗಿಯಾಗಿರುತ್ತಾರೆ. ನಾವು ಮಾತನಾಡಿಸಿದವರಲ್ಲಿ ಒಬ್ಬರು ನಮ್ಮೊಂದಿಗೆ ಹಂಚಿಕೊಂಡಂತೆ ಮಹಿಳಾ ಉದ್ಯೋಗಿಗಳು ಈ ರೀತಿಯ ದೂರುಗಳನ್ನು ಸಂಸ್ಥೆಯ

ಹಿರಿಯ ಪುರುಷ ಸದಸ್ಯರಿಗೆ ಕೊಡಲಾಗುವುದಿಲ್ಲ. ಅವರೇ ಉದ್ಯೋಗಿಗಳ ದೂರುಗಳನ್ನಾಲಿಸುವ ವಿಭಾಗದ ಮುಖ್ಯಸ್ಥರಾಗಿರುತ್ತಾರೆ. ಈ ಪರಿಸ್ಥಿತಿಯ ಒತ್ತಡವನ್ನು ನಿಭಾಯಿಸಲು ಸಾಧ್ಯವಾಗದೆ ಹಲವಾರು ಮಹಿಳೆಯರು ಕೆಲಸ ಬಿಟ್ಟ ಉದಾಹರಣೆಗಳಿವೆ ಎಂದು ಹೇಳಿದರು.

### ನೈತಿಕ ಪೋಲಿಸ್‌ಗಿರಿ ಮತ್ತು ಲಿಂಗಭೇದ

ಮಹಿಳಾ ಉದ್ಯೋಗಿಗಳ ಉಡುಪು ಹಾಗೂ ಪುರುಷ ಸಹದ್ಯೋಗಿಗಳೊಂದಿಗಿನ ಅವರ ವರ್ತನೆ ಮತ್ತಿತರ ವಿಷಯಗಳ ಕುರಿತು ಸದಾ ಕಣ್ಣಿಡಲಾಗುತ್ತದೆ. ಹಾಗೂ ಅವರ 'ನಡತೆ'ಯ ಕುರಿತು ಪ್ರಶ್ನೆಗಳನ್ನು ಎತ್ತಲಾಗುತ್ತದೆ ಎನ್ನುವುದು ಈ ಅಧ್ಯಯನದ ಮೂಲಕ ತಿಳಿದುಬಂದಿದೆ. ಮಹಿಳೆಯರು ತಮ್ಮ ವೃತ್ತಿಯ ಹಿತದೃಷ್ಟಿಯಿಂದ ತಮ್ಮೊಂದಿಗಿನ ಪುರುಷ ಸಹೋದ್ಯೋಗಿಗಳೊಂದಿಗೆ ಸ್ನೇಹದಿಂದ ಇರುವುದನ್ನೇ ತಪ್ಪಾಗಿ ಅರ್ಥೈಸಿಕೊಂಡು ಲೈಂಗಿಕ ಸಂಬಂಧಕ್ಕೆ ಪರವಾನಿಗೆ ಎಂದು ತಿಳಿಯುವವರಿದ್ದಾರೆ. ಈ ರೀತಿಯ ಸಂಬಂಧದ ನಿರಾಕರಣೆಯಿಂದ ಬಡ್ತಿ ಕಳೆದುಕೊಳ್ಳಬಹುದು, ವೇತನ ಹೆಚ್ಚಳ ಕಳೆದುಕೊಳ್ಳಬೇಕಾಗಬಹುದು, ಮುಖ್ಯವಾದ ಅಸೈನ್‌ಮೆಂಟ್‌ಗಳು ಸಿಗದೆ ಹೋಗಬಹುದು, ಇಲ್ಲವೇ ಕೆಲಸವನ್ನೇ ಕಳೆದುಕೊಳ್ಳಬೇಕಾಗಬಹುದು. ಜೊತೆಗೆ ತಮ್ಮ ನಡತೆಯ ಕುರಿತು ತಾವೇ ಸದಾ ಗಮನಿಸುತ್ತಿರಬೇಕು. ಪುರುಷರಂತೆ ಮಹಿಳೆಯರು ಸಂಬಳ ಪಡೆದು ಕೆಲಸ ಮಾಡುತ್ತಿದ್ದರೂ ಕೂಡ ಸಂಸ್ಥೆಯ ಗೌರವವನ್ನು ಎತ್ತಿಹಿಡಿಯುವ ಹೊಣೆ ಮಹಿಳೆಯರ ಮೇಲೆಯೇ ಇರುತ್ತದೆ. ಆದ್ದರಿಂದ ತಾವು 'ಗೌರವಯುತವಾಗಿ' ನಡೆದುಕೊಳ್ಳುತ್ತ ತಮ್ಮ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ.

### ಮಹಿಳೆಯರನ್ನು ನಿಭಾಯಿಸುವಿಕೆಯ ತಂತ್ರಗಳು

ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಯಾವುದೇ ಔಪಚಾರಿಕ ನೆರವು ಇಲ್ಲದಿದ್ದರೂ ಪತ್ರಕರ್ತೆಯರು ಈ ರೀತಿಯ ಲೈಂಗಿಕ ಕಿರುಕುಳವನ್ನು ಎದುರಿಸಲು ತಮ್ಮದೇ ಆದ ದಾರಿಗಳನ್ನು ಕಂಡುಕೊಂಡಿದ್ದಾರೆ. ಮಹಿಳೆಯರು ತಮ್ಮಲ್ಲೇ ಒಗ್ಗಟ್ಟಾಗಿ ಒಬ್ಬರಿಗೊಬ್ಬರು ಅವಶ್ಯಕತೆ ಇದ್ದಾಗ ನೆರವು ನೀಡುತ್ತಾರೆ. ಅಧ್ಯಯನ ತಂಡ ಮಾತನಾಡಿಸಿದವರಲ್ಲಿ ಕೆಲವರು ಕೆಟ್ಟದಾಗಿ ನಡೆದುಕೊಂಡ ಪುರುಷ ಸಹದ್ಯೋಗಿಗಳಿಗೆ ಅವಮಾನ ಮಾಡಿದ್ದನ್ನು ಹೇಳಿದರು. ಹಾಗೆ ಮಾಡಿದರೆ ಅವರು ಬದಲಾಗಬಹುದೆಂಬ ನಿರೀಕ್ಷೆಯಿತ್ತೆಂದು ಹೇಳಿದರು. ಅದು ಯಾವಾಗಲೂ ಸಾಧ್ಯವಾಗುವುದಿಲ್ಲ. ಕೆಲವರು ಇಂತಹ ಅವಮಾನದಿಂದ ಬದಲಾಗಬಹುದು. ಉಳಿದವರು ಸಣ್ಣಸಣ್ಣ ತಪ್ಪುಗಳಿಗೂ ಇನ್ನೂ ಹೆಚ್ಚು ಕಿರುಕುಳ ಕೊಡಬಹುದು. "ಆಕೆ ಕೊಟ್ಟ ಕೆಲಸ ಮಾಡುವುದರಲ್ಲಿ ಅಸಮರ್ಥಳು" ಎಂದು ಸಬೂಬು ಹೇಳಬಹುದು. ಈ ಲೈಂಗಿಕ ಕಿರುಕುಳದ ಕಾರಣದಿಂದಲೂ ಮಹಿಳೆಯರು ಕೆಲಸ ಬಿಡುವುದು ಹೆಚ್ಚಾಗಿದೆ.

### ೪. ಲಿಂಗಾಧಾರಿತ ತಾರತಮ್ಯದೊಂದಿಗೆ ಭಾಷೆ, ಪ್ರದೇಶ ಮತ್ತು ಜಾತಿವಾರು ತಾರತಮ್ಯಗಳು

ಕರ್ನಾಟಕದಲ್ಲಿನ ಮಾಧ್ಯಮ ಸಂಸ್ಥೆಗಳಲ್ಲಿ ಕರ್ನಾಟಕದ ಕೆಲವೇ ಜಿಲ್ಲೆಗಳು ಮತ್ತು ಪ್ರದೇಶಗಳ ಮೇಲ್ವರ್ಗದವರ ಪ್ರಾಬಲ್ಯ ಹೆಚ್ಚಿದೆ. ಈ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಹಿರಿಯರು ತಮ್ಮ ಜಾತಿ ಹಾಗೂ ಪ್ರದೇಶಗಳ ಜನರನ್ನೇ ಕೆಲಸಕ್ಕೆ ನೇಮಿಸಿಕೊಳ್ಳುತ್ತಾರೆ. ಜಾತಿ ಹಾಗೂ ಪ್ರಾದೇಶಿಕತೆಗಳು ಉದ್ಯೋಗ ಗಳಿಸುವಲ್ಲಿ ಹಾಗೂ ಉದ್ಯೋಗದಲ್ಲಿ ಬಡ್ತಿ ಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

### 'ಪ್ರಮಾಣಿತ' ಹಾಗೂ 'ಉತ್ತಮ' ಕನ್ನಡ ಭಾಷೆ ಎನ್ನುವ ಕಲ್ಪನೆಗಳು

ಕರ್ನಾಟಕದಲ್ಲಿ ಹಲವು ರೀತಿಯ ಕನ್ನಡವನ್ನು ಮಾತನಾಡುತ್ತಾರೆ. ಇಲ್ಲಿ ಹಲವು ಬಗೆಯ ಪ್ರಾಂತೀಯ ಕನ್ನಡ ಭಾಷೆಯಿದೆ. ಆದರೆ, ಹಳೇ ಮೈಸೂರು ಭಾಗದ ಕನ್ನಡ, ದಕ್ಷಿಣ ಕನ್ನಡದವರ ಕನ್ನಡ ಹಾಗೂ ಮೇಲ್ಜಾತಿಯ ಜನ ಬಳಸುವ ಕನ್ನಡವೇ ಶ್ರೇಷ್ಠ ಎಂದು ಪರಿಗಣಿಸಲಾಗಿದೆ. ಇದೇ 'ಪ್ರಮಾಣಿತ' ಕನ್ನಡ ಎನ್ನುವ ಮಿಥ್ ಅನ್ನು ಹುಟ್ಟುಹಾಕಲಾಗಿದೆ. ಮಾಧ್ಯಮ ಕೆಲಸ ಮಾಡುವುದೇ ಭಾಷೆಯ ಮೂಲಕ.

ಹಾಗಾಗಿ ಈ 'ಪ್ರಮಾಣಿತ' ಕನ್ನಡವನ್ನು ಮಾತನಾಡದ, ಬಳಸದ ಪತ್ರಕರ್ತೆಯರನ್ನು ಕೀಳಾಗಿ ನೋಡಲಾಗುತ್ತದೆ.

ಈ ಭಾಷಿಕ ಕಂದರವು ನೇಮಕಾತಿ ಹಾಗೂ ವೃತ್ತಿಗೆ ತೊಡಕುಂಟುಮಾಡಿದೆ. ಜೊತೆಗೆ ಹೆಚ್ಚಿನ ಮಾಧ್ಯಮ ಸಂಸ್ಥೆಗಳು ಬೆಂಗಳೂರಿನಲ್ಲಿರುವುದು ಕೂಡ ಈ ಅನನುಕೂಲ ಹೆಚ್ಚಲು ಕಾರಣವಾಗಿದೆ. ರಾಜಧಾನಿ ಬೆಂಗಳೂರಿನಿಂದ ದೂರವಿರುವ ಉತ್ತರ ಕರ್ನಾಟಕ ಹಾಗೂ ಒಳನಾಡಿನ ಜಿಲ್ಲೆಗಳಲ್ಲಿರುವ ಮಹಿಳೆಯರಿಗೆ ತಾವು ಅಸಮರ್ಥರು ಎನ್ನುವ ಭಾವವನ್ನು ಹುಟ್ಟುಹಾಕಿದೆ.

**'ಅರ್ಹತೆ' ಎನ್ನುವ ಚಾತುರ್ಯ**

ಈ ಅಧ್ಯಯನದಲ್ಲಿ ಭಾಗವಹಿಸಿದ ಮೇಲ್ಜಾತಿಯ ಪತ್ರಕರ್ತೆಯರು, "ಕರ್ನಾಟಕದ ಮಾಧ್ಯಮ ಸಂಸ್ಥೆಗಳಲ್ಲಿ ಜಾತಿ ತಾರತಮ್ಯವಿಲ್ಲ. ಅರ್ಹತೆಯೇ ಮುಖ್ಯ ಮಾನದಂಡ" ಎಂದು ಹೇಳಿದರು. ಆದರೆ ಕೆಲವು ದಲಿತ ಪತ್ರಕರ್ತೆಯರು ಇದನ್ನು ನಿರಾಕರಿಸಿದರು. ವ್ಯಕ್ತಿಯೊಬ್ಬರ ಜಾತಿ ಯಾವುದೆಂದು ತಿಳಿದರೆ ಅವರನ್ನು ನಡೆಸಿಕೊಳ್ಳುವ ರೀತಿ ಹೇಗೆ ಬದಲಾಗುತ್ತದೆ, ಅದರಲ್ಲೂ ಪರಿಶಿಷ್ಟ ಜಾತಿಗೆ ಸೇರಿದವರ ಪಾಡೇನು ಎನ್ನುವುದರ ಕುರಿತು ಮಾತನಾಡಿದರು. ವ್ಯಕ್ತಿಯೊಬ್ಬ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದರೆ ಅವರು ಮೇಲ್ಜಾತಿಗೆ ಸೇರಿದವರೇ ಆಗಿರುತ್ತಾರೆ ಎನ್ನುವುದು ಸಾಮಾನ್ಯ ನಂಬಿಕೆಯಾಗಿಹೋಗಿದೆ.

ಜಾತಿ ಆಧಾರಿತ ಸಂಪರ್ಕಗಳು ಮೇಲ್ಜಾತಿಯ ಮಹಿಳೆಯರು ಕೆಲಸ ಗಳಿಸಲು ಹಾಗೂ ಆಡಳಿತ ಮಂಡಳಿಯ ನೆರವು ಪಡೆಯಲು ಕಾರಣವಾಗಿದೆ. ಅವರಿಗೆ ಅನುಕೂಲವಾಗುವಂತಹ ಕೆಲಸದ ವೇಳೆ ಮತ್ತಿತರ ಸವಲತ್ತುಗಳು ಸಿಗಲು ಕಾರಣವಾಗಿದೆ. ಇವೆಲ್ಲವೂ ಮೇಲ್ಜಾತಿಯ ಮಹಿಳೆಯರಿಗೆ ಸಿಗುತ್ತಿರುವುದು 'ಅನ್ಯ' ಜಾತಿಗಳ ಮಹಿಳೆಯರಿಂದ ಈ ಸವಲತ್ತುಗಳನ್ನು ದೂರವಾಗಿಸುವ ಮೂಲಕ. ಎಷ್ಟೆಲ್ಲಾ ಅಡೆತಡೆಗಳನ್ನು ದಾಟಿ ಬಂದ ಉಳಿದ 'ಅನ್ಯ' ಜಾತಿಯ ಮಹಿಳೆಯರನ್ನು ಪಕ್ಕಕ್ಕೆ ಸರಿಸಿ ಈ ಮೇಲ್ಜಾತಿಯ ಮಹಿಳೆಯರು ಬೆಳೆಯಲು ಅವಕಾಶ ಮಾಡಿಕೊಡಲಾಗುತ್ತದೆ.

ಸಂಸ್ಥೆಯ ಸ್ವರೂಪ ಹಾಗೂ ತಮ್ಮ ನೇಮಕಾತಿಯ ನೀತಿಗಳು ಎಲ್ಲರನ್ನೂ ಒಳಗೊಳ್ಳುವಂತಿರಬೇಕು ಎನ್ನುವ ಕುರಿತು ಆತ್ಮವಿಮರ್ಶೆ ಮಾಡಿಕೊಳ್ಳುವುದು ಈಗಿನ ತುರ್ತು. ಸಾಮಾಜಿಕ ನ್ಯಾಯವನ್ನು ಹಲವು ಬಗೆಗಳಲ್ಲಿ ಒಳಗೊಂಡಂತಹ ರಾಜ್ಯದ ಮಾಧ್ಯಮ ವಲಯವು ತಮ್ಮ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ತನ್ನ ವಿಧಾನಗಳನ್ನು ಬದಲಿಸಿಕೊಳ್ಳಬೇಕಿದೆ. ಹಾಗೂ ತಮ್ಮ ಮಹಿಳಾ ಉದ್ಯೋಗಿಗಳಿಗೂ ಸೂಕ್ತ ವೇದಿಕೆ ಕಲ್ಪಿಸಬೇಕಿದೆ.

ಈ ಅಧ್ಯಯನವು ಮಾಧ್ಯಮ ಕ್ಷೇತ್ರದ ಆತ್ಮವಿಮರ್ಶೆ ಮತ್ತು ಮೌಲ್ಯಮಾಪನದ ಅಗತ್ಯದ ಕಡೆ ಗಮನಸೆಳೆಯುತ್ತದೆ. ತಮ್ಮ ಸಂಸ್ಥೆಗಳಲ್ಲಿ ಸಮಗ್ರವಾಗಿ ತರಬೇಕಾಗಿರುವ ಪರಿಣಾಮಕಾರಿ ಬದಲಾವಣೆಗಳ ತುರ್ತಿನ ಕುರಿತು ಮಾತನಾಡುತ್ತದೆ. ಪತ್ರಕರ್ತೆಯರಿಗೆ ಅನೌಪಚಾರಿಕ ನೆರವು ಸಿಗದೇ ಇರಬಹುದು. ಅವರು ತಮ್ಮ ಕುಟುಂಬದೊಂದಿಗಿನ 'ಉತ್ತಮ' ಸಂಬಂಧವನ್ನು ನಿಭಾಯಿಸಲು ಹೆಣಗಬಹುದು. ಆದರೆ, ಸಂಸ್ಥೆಗಳು ಅವರಿಗೆ ನೀಡಬೇಕಾದ ಮಕ್ಕಳ ಪಾಲನಾ ಕೇಂದ್ರಗಳು, ಕ್ಯಾಬ್ ಸರ್ವಿಸ್‌ಗಳು, ತಾಯ್ತನದ ಲಾಭಗಳು ಹಾಗೂ ಮುಟ್ಟಿನ ದಿನಗಳ ರಜಾ ಸೌಲಭ್ಯ ಇತರ ವ್ಯವಸ್ಥೆಗಳನ್ನು ಒದಗಿಸಬೇಕು. ಮಹಿಳೆರು ತಮ್ಮೆಲ್ಲ ಸಾಮರ್ಥ್ಯದೊಂದಿಗೆ ಕೆಲಸ ಮಾಡುತ್ತಾ ತಮ್ಮ ವೃತ್ತಿಜೀವನವನ್ನು ರೂಪಿಸಿಕೊಳ್ಳಲು ಮಾಧ್ಯಮ ಸಂಸ್ಥೆಗಳು ನೆರವಾಗಬೇಕು. ಲೈಂಗಿಕ ಕಿರುಕುಳದಂತಹ ಸಮಸ್ಯೆಯನ್ನು ಪರಿಹರಿಸಲು ಸೂಕ್ತ ವ್ಯವಸ್ಥೆಯನ್ನು ಕಂಡುಕೊಳ್ಳಬೇಕು. ಮಹಿಳೆಯರು ಸುರಕ್ಷಿತವಾಗಿ, ಆತ್ಮಗೌರವದೊಂದಿಗೆ ಕೆಲಸ ಮಾಡಲು ಸಾಧ್ಯವಾಗುವಂತಹ ವಾತಾವರಣವನ್ನು ನಿರ್ಮಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲ ಹಂತಗಳಲ್ಲಿ, ವೈಯಕ್ತಿಕ ಹಾಗೂ ಆಡಳಿತದಲ್ಲಿ ರೂಢಿಯಲ್ಲಿರುವಂತಹ ಲಿಂಗತಾರತಮ್ಯವನ್ನು ತೊಡೆದು ಹಾಕಿ ಮಹಿಳೆಯರು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾ ಬೆಳೆಯಲು ಸಾಧ್ಯವಾಗಬೇಕು. ಇದಕ್ಕಾಗಿ ಮಾಧ್ಯಮ ಸಂಸ್ಥೆಗಳು ಆತ್ಮಾವಲೋಕನ ಮಾಡಿಕೊಳ್ಳಬೇಕಾದ್ದು ಅನಿವಾರ್ಯ.